# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಶಾಸನಬದ್ಧ ಸಹಕಾರಿ ಸಂಸ್ಥೆ

ಸೌಹಾರ್ದ ಸಹಕಾರಿ ಸೌಧ, ನಂ.68, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು–560055, Ph : 080-23378375-80, website : www.souharda.coop
Email : souharda@souharda.coop


## ಸೌಹಾರ್ದ ಸಹಕಾರಿಗಳಲ್ಲಿ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು

## ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರಡಿ ನೋಂದಣಿಯಾದ ಸೌಹಾರ್ದ ಸಹಕಾರಿಗಳಿಗೆ ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ ಆಡಳಿತ ಮಂಡಲಿ ಮತ್ತು ಸಾಮಾನ್ಯ ಸಭೆಗಳಿಗೆ ಕಲಂ 31 ರಲ್ಲಿ ಅಧಿಕಾರ ನೀಡಿದೆ. ರಾಜ್ಯದಲ್ಲಿ 6500 ಕ್ಕೂ ಹೆಚ್ಚು ಸಹಕಾರಿಗಳು ನೋಂದಣಿಯಾಗಿದ್ದು, 75,000 ಕ್ಕೂ ಹೆಚ್ಚು ಸಿಬ್ಬಂದಿಗಳು ನೇಮಕಾತಿ ಹೊಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ಇದರಲ್ಲಿ ನಿಯಮ 6ಎಲ್ 2015 ರಲ್ಲಿ ಸೇರ್ಪಡೆಯಾಗಿದ್ದು, ದಿನಾಂಕ 20.06.2015 ರಿಂದ ಜಾರಿಗೆ ಬಂದಿರುತ್ತದೆ. ಆದರೆ ಅನೇಕ ಸಹಕಾರಿಗಳು ಇದನ್ನು ಸರಿಯಾಗಿ ಪಾಲನೆ ಮಾಡುತ್ತಿಲ್ಲದಿರುವುದು ಕಂಡುಬಂದಿದೆ. ಆಯಾ ಸಹಕಾರಿಯ ಮಂಡಲಿ ಸಭೆಯಲ್ಲೇ ನಿರ್ಣಯ ಮಾಡಿ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ನಿಯಮ ಪಾಲನೆ ಮಾಡುತ್ತಿರುವ ಸಹಕಾರಿಗಳೂ ಸಹ, ಸಂಯುಕ್ತ ಸಹಕಾರಿಯ ಪ್ರತಿನಿಧಿಯನ್ನು ಸಮಿತಿಗೆ ಆಹ್ವಾನಿಸದೇ, ಸಂದರ್ಶನದ ದಿನ ಕಳುಹಿಸುವಂತೆ ಕೋರಿಕೆ ಕಳುಹಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಸದಸ್ಯ ಸಹಕಾರಿಗಳ ನೇಮಕಾತಿ ಕುರಿತು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಚರ್ಚಿಸಿ, ಸಾಮಾನ್ಯ ಸಭೆಯ ಅನುಮತಿ ಪಡೆದು ಮಾರ್ಗದರ್ಶಿಗಳನ್ನು ರಚಿಸಿರುತ್ತದೆ. ಅದು ಈ ಕೆಳಗಿನಂತಿದೆ.

## ಸೌಹಾರ್ದ ಸಹಕಾರಿಗಳಲ್ಲಿ ಸಿಬ್ಬಂದಿ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು

ಕ.ಸೌ.ಸ. ಅಧಿನಿಯಮ, 1997ರ ಕಲಂ 53 (7) (ಎ) ಕ.ಸೌ.ಸ.ನಿಯಮಗಳು, 2004ರ ನಿಯಮ 6ಎಲ್ ಅಡಿ

ಸಂಖ್ಯೆ : ಸಂಸ/ಆಸು-02/2026-27 ದಿನಾಂಕ: 01.04.2026

1. ಸಾಮಾನ್ಯ ನಿಕಾಯದ ಅನುಮೋದನೆಗೆ ಒಳಪಟ್ಟು ಸಹಕಾರಿಯ ಆಡಳಿತ ಮಂಡಲಿಯು ಕಾಲಕಾಲಕ್ಕೆ ಸಹಕಾರಿಯ ಕಾರ್ಯಭಾರ ಮತ್ತು ವ್ಯವಹಾರದ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು, ಸಹಕಾರಿಯ ಸಿಬ್ಬಂದಿಯ ವೃಂದ ಬಲವನ್ನು ಮತ್ತು ಸೌಹಾರ್ದ ಸಹಕಾರಿಯ ಆರ್ಥಿಕ ಸ್ಥಿತಿಯನ್ನು ಆಧರಿಸಿ ಹಾಗೂ ಕನಿಷ್ಠ ವೇತನ ಕಾಯ್ದೆಯನ್ನು ಪರಿಗಣಿಸಿ, ಅದರ ಪ್ರತಿಯೊಬ್ಬ ಸಿಬ್ಬಂದಿಗೆ ಲಭ್ಯವಾಗತಕ್ಕ ವೇತನ ಶ್ರೇಣಿ ಮತ್ತು ಇನ್ನಿತರ ಭತ್ಯೆಗಳನ್ನು ನಿರ್ಧರಿಸತಕ್ಕದ್ದು.
2. ನೇರ ನೇಮಕಾತಿ ಮಾಡುವಾಗ ಸಹಕಾರಿಯ ಉಪವಿಧಿ/ ಸಿಬ್ಬಂದಿ ಸೇವಾ ನಿಯಮಗಳೊಂದಿಗೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ನಿಯಮಗಳನ್ನು ಅನುಸರಿಸತಕ್ಕದ್ದು.
3. ಸಾಮಾನ್ಯ ನಿಕಾಯದಿಂದ ಅನುಮೋದನೆಯಾದ ವೃಂದ ಸಂಖ್ಯೆಯ ಮಿತಿಯಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 6ಎಲ್ ರಂತೆ ಸಮಿತಿ ರಚನೆ ಮಾಡಿ ಸಮಿತಿಯ ಉಸ್ತುವಾರಿಯಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸತಕ್ಕದ್ದು. ಈ ಕುರಿತು ಆಡಳಿತ ಮಂಡಲಿ ಸಭೆಗೆ ವಿಷಯ ಮಂಡಿಸಿ, ನಿರ್ಣಯಿಸಿ, ಸಮಿತಿಯನ್ನು ರಚಿಸತಕ್ಕದ್ದು. ಸದರಿ ನಿರ್ಣಯದಲ್ಲಿ ಸಮಿತಿಗೆ ಬಾಹ್ಯ ತಜ್ಞರ ಹೆಸರು, ನೇಮಕವಾಗಬೇಕಾದ ವೃಂದಶಃ ಸಿಬ್ಬಂದಿಗಳ ಸಂಖ್ಯೆ, ನೇಮಕಾತಿಯ ವಿಧಾನ, ಕಾಲಮಿತಿ ಇತ್ಯಾದಿಗಳು ಇರತಕ್ಕದ್ದು.
4. ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 6ಎಲ್ ರಂತೆ ಸಮಿತಿ ರಚನೆ ಈ ಕೆಳಗಿನಂತೆ ಇರತಕ್ಕದ್ದು,

   I. ಸಹಕಾರಿಯ ಅಧ್ಯಕ್ಷರು - ಅಧ್ಯಕ್ಷರು

   II. ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಆಯ್ಕೆ ಮಾಡಿಕೊಂಡ ಒಬ್ಬ ಸದಸ್ಯರು - ಸದಸ್ಯರು

   III. ಸಂಯುಕ್ತ ಸಹಕಾರಿಯ ಒಬ್ಬ ಪ್ರತಿನಿಧಿ - ಸದಸ್ಯರು

   IV. ಸಹಕಾರಿಯಿಂದ ನಾಮಕರಣಗೊಂಡ ಸಹಕಾರ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಬಾಹ್ಯ ತಜ್ಞರು - ಸದಸ್ಯರು

v. ಸಹಾರಿಯ ಮುಖ್ಯಕಾರ್ಯನಿರ್ವಾಹಕ - ಸದಸ್ಯ ಕಾರ್ಯದರ್ಶಿ

ಸಮಿತಿಯ ಸಭೆಗೆ ಅವಶ್ಯ ಕೋರಂ ಕನಿಷ್ಠ ಮೂರು ಇರತಕ್ಕದ್ದು.

5. ಮಂಡಲಿ ಸಭೆ ಕರೆಯುವ/ ನಡೆಸುವ ಕಾರ್ಯವಿಧಾನವು ಸಮಿತಿ ಸಭೆ ಕರೆಯಲು/ ನಡೆಸಲು ಯಥೋಚಿತ ವ್ಯತ್ಯಾಸದೊಂದಿಗೆ ಅನ್ವಯವಾಗತಕ್ಕದ್ದು. ನೇರ ನೇಮಕಾತಿ ಕುರಿತು ಪತ್ರಿಕಾ ಪ್ರಕಟಣೆ ದಿನಾಂಕ, ಲಿಖಿತ ಪರೀಕ್ಷೆ ದಿನಾಂಕ, ಸಂದರ್ಶನದ ದಿನಾಂಕ ಇವುಗಳನ್ನು ಸಮಿತಿಯೇ ನಿರ್ಣಯಿಸತಕ್ಕದ್ದು.

6. ನೇರ ನೇಮಕಾತಿಯ ಯಾವುದೇ ಹುದ್ದೆಯನ್ನು ಭರ್ತಿ ಮಾಡುವಾಗ ಖಾಲಿ ಸ್ಥಾನಗಳ ಬಗ್ಗೆ ಸುದ್ದಿ ಪತ್ರಿಕೆಗಳಲ್ಲಿ ವಿವರವಾದ ಪ್ರಕಟಣೆ ನೀಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸತಕ್ಕದ್ದು. ಪತ್ರಿಕಾ ಪ್ರಕಟಣೆಯಲ್ಲಿ, ವೃಂದಶಃ ಹುದ್ದೆಗಳ ಸಂಖ್ಯೆ, ವಯೋಮಿತಿ, ವಿದ್ಯಾರ್ಹತೆ, ವೇತನಶ್ರೇಣಿ, ಅರ್ಜಿ ಸಲ್ಲಿಕೆಗೆ ಅಂತಿಮ ದಿನಾಂಕ, ಅರ್ಜಿ ಸಲ್ಲಿಸುವ ವಿಧಾನ ಇತ್ಯಾದಿಗಳನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

   ಪರಂತು, ಒಂದು ಕೋಟಿ ರೂಪಾಯಿಗಳಿಗಿಂತ ಕಡಿಮೆ ದುಡಿಯುವ ಬಂಡವಾಳ ಹೊಂದಿರುವ ಸಹಕಾರಿಗಳಿಗೆ ಪತ್ರಿಕಾ ಪ್ರಕಟಣೆಯಿಂದ ವಿನಾಯಿತಿ ಇರುತ್ತದೆ.

7. ಸಮಿತಿ ರಚನೆ ಕುರಿತು ಮಂಡಲಿಯು ನಿರ್ಣಯ ತೆಗೆದುಕೊಂಡ ಕೂಡಲೇ ಸಮಿತಿಗೆ ಸಂಯುಕ್ತ ಸಹಕಾರಿಯ ಒಬ್ಬ ಪ್ರತಿನಿಧಿಯನ್ನು ನಿಯೋಜಿಸಲು ಕೋರಿ ಸಂಯುಕ್ತ ಸಹಕಾರಿಗೆ ಪತ್ರ ಸಲ್ಲಿಸತಕ್ಕದ್ದು.

8. ಸಂದರ್ಶನ ನಡೆಸುವ ಅಥವಾ ಲಿಖಿತ/ ಅರ್ಹತಾ ಪರೀಕ್ಷೆಯಲ್ಲಿ ಗಳಿಸುವ ಅಂಕಗಳ ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡುವ ವಿವೇಚನಾಧಿಕಾರವು ಆಯ್ಕೆ ಸಮಿತಿಗಿರುತ್ತದೆ. ಈ ರೀತಿ ಆಯ್ಕೆ ಮಾಡಿದ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಆಡಳಿತ ಮಂಡಲಿ ಅನುಮೋದನೆ ಪಡೆದು ಪ್ರಕಟಿಸತಕ್ಕದ್ದು.

9. ಪ್ರಕ್ರಿಯೆ ಪೂರ್ಣವಾದ ನಂತರ, ಆಯ್ಕೆಯಾದ ಅಭ್ಯರ್ಥಿಗಳ ಹೆಸರುಗಳ ಸಹಿತ ವರದಿಯನ್ನು ಸಹಕಾರಿಯ ಆಡಳಿತ ಮಂಡಲಿಗೆ ಸಲ್ಲಿಸತಕ್ಕದ್ದು. ಮಂಡಲಿ ಸಭೆಯಲ್ಲಿ ಅನುಮೋದನೆಯಾದ ನಂತರ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ಪತ್ರವನ್ನು ಮುಖ್ಯಕಾರ್ಯನಿರ್ವಾಹಕನು ನೀಡತಕ್ಕದ್ದು.

10. ನೇರ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣವಾಗಿ, ಪ್ರಾರಂಭದಿಂದ ಪೂರ್ಣಗೊಳ್ಳುವವರೆಗೆ, ಈ ಸಮಿತಿಯೇ ನಿರ್ವಹಿಸತಕ್ಕದ್ದು. ನೇಮಕಾತಿ ಪ್ರಕ್ರಿಯೆ ಪೂರ್ಣವಾಗಿ ಮಂಡಲಿಗೆ ವರದಿ ಸಲ್ಲಿಕೆಯಾದ ತಕ್ಷಣ ಸಮಿತಿ ಮುಂದುವರಿಕೆ ಅಥವಾ ವಿಸರ್ಜನೆ ಕುರಿತು ಆಡಳಿತ ಮಂಡಲಿಯು ಸೂಕ್ತವಾಗಿ ನಿರ್ಧರಿಸತಕ್ಕದ್ದು.

11. ಸಹಕಾರಿಯ ನೇರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡ ನಂತರ, ಸಮಿತಿ ಸಭೆಯ ನೋಟೀಸ್ ಪ್ರತಿಗಳು, ನಡವಳಿಗಳ ಪ್ರತಿಗಳು, ಪತ್ರಿಕಾ ಪ್ರಕಟಣೆಯ ಪ್ರತಿ ಮತ್ತು ಆಯ್ಕೆಯಾದ ಸಿಬ್ಬಂದಿಗಳ ಪಟ್ಟಿಗಳನ್ನು ದೃಢೀಕರಿಸಿ, ವರದಿಯೊಂದಿಗೆ ಸಂಯುಕ್ತ ಸಹಕಾರಿಗೆ ಮುಖ್ಯಕಾರ್ಯನಿರ್ವಾಹಕನು ಸಲ್ಲಿಸತಕ್ಕದ್ದು.

12. ಸಹಕಾರಿಯ ಆಡಳಿತ ಮಂಡಲಿಯು ತುರ್ತು ಸಂದರ್ಭದಲ್ಲಿ ಅಥವಾ ತಾತ್ಕಾಲಿಕ ಅವಧಿಗಾಗಿ ಸಿಬ್ಬಂದಿಗಳನ್ನು "ಗುತ್ತಿಗೆ" ಆಧಾರದ ಮೇಲೆ ಸಹಕಾರಿಯ ಹಿತದೃಷ್ಟಿಯಿಂದ ಸಾಮಾನ್ಯವಾಗಿ ಹನ್ನೊಂದು ತಿಂಗಳ ಅವಧಿ ಮೀರದಂತೆ ನೇಮಕ ಮಾಡಿಕೊಳ್ಳಬಹುದಾಗಿದೆ. ಗುತ್ತಿಗೆ ಸಿಬ್ಬಂದಿಗಳನ್ನು ದೀರ್ಘಕಾಲೀನವಾಗಿ ಮುಂದುವರೆಸತಕ್ಕದ್ದಲ್ಲ.

13. ಇನ್ನೊಂದು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿ ವಯೋನಿವೃತ್ತರಾದವರನ್ನು ಹಾಗೂ 60 ವರ್ಷ ಮೀರಿದ ಯಾವುದೇ ವ್ಯಕ್ತಿಗಳನ್ನು ಸಿಬ್ಬಂದಿಗಳಾಗಿ ನೇಮಕ ಮಾಡಿಕೊಳ್ಳತಕ್ಕದ್ದಲ್ಲ. ಅಗತ್ಯವಿದ್ದಲ್ಲಿ ಅಂತಹವರನ್ನು ಸಲಹೆಗಾರರನ್ನಾಗಿ ನೇಮಕ ಮಾಡಿಕೊಳ್ಳಬಹುದು.

ಸೌಹಾರ್ದ ಸಹಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಮಾರ್ಗದರ್ಶಿಗಳು ಕುರಿತಾದ ಸುತ್ತೋಲೆಯನ್ನು ನನ್ನ ಸಹಿ ಮತ್ತು ಸಂಯುಕ್ತ ಸಹಕಾರಿಯ ಮೊಹರಿನೊಂದಿಗೆ ದಿನಾಂಕ 01.04.2026 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

ಸಹಿ/-

(ಶರಣಗೌಡ ಜಿ. ಪಾಟೀಲ)
ವ್ಯವಸ್ಥಾಪಕ ನಿರ್ದೇಶಕ